ಯನ್ನು ಮಾಡಲಿಕ್ಕೆ ಅವ್ಹೊತ್ತಿನ ಮುಖ್ಯಮಂತ್ರಿಯಾಗಿದ್ದ ಶ್ರೀ ಹೆಗಡೆಯವರ ಮೇಲೆ ನಾವೆಲ್ಲಾ ಪ್ರಭಾವ ಬೀರಿ ಇದನ್ನು ಮಾಡಲೇಬೇಕೆಂದು ತೆಗೆದುಕೊಂಡು ಬಂದೆವು. ಮೂರನೇ ಯೋಜನೆಯಲ್ಲಿ ಆಗದೇ ಇರುವುದರಿಂದ ನಾಲ್ಕನೇ ಯೋಜನೆ ಪ್ರಾರಂಭ ಮಾಡಿದಾಗ ನಮ್ಮ ಜಮೀನಿನ ಮೇಲೆ ನೀರನ್ನು ತೆಗೆದುಕೊಂಡು ಬರುತ್ತೀರಿ, ಆದ್ದರಿಂದ ಕೊನೇಪಕ್ಷ ಆ ಟೌನ್‌ಗಳಿಗೆ ನೀರನ್ನು ಕೊಡಲಿಕ್ಕೆ ಸಾಧ್ಯವೆ ? ಆ ಯೋಜನೆಯಲ್ಲಿ ಸೇರಿಸತಕ್ಕಂಥ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಿಂಧ್ಯ ಅವರು ಹಿಂದಿನ ಸರ್ಕಾರದಲ್ಲಿ ಬಹಳ ಪ್ರಭಾವಯುತ ಮಂತ್ರಿಗಳಾಗಿದ್ದು, ತಾವು ಏನು ಮಾಡಲಿಕ್ಕೆ ಸಾಧ್ಯವಾಗಲಿಲ್ಲವೋ ಅದನ್ನು ನಮ್ಮ ಸರ್ಕಾರದ ಅವಧಿಯಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ನಿವೇಶನ ಹಂಚಿಕೆ

೫೪೪. ಶ್ರೀ ಕರಿಯಣ್ಣ (ಹೊಳಹೊನ್ನೂರು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ನಗರ ಸಭೆಗಳು ಮತ್ತು ಪುರಸಭೆಗಳು ತಮ್ಮ ವ್ಯಾಪ್ತಿಯಲ್ಲಿ ನಿವೇಶನಗಳನ್ನು ಮಾಡಿ ಹಂಚಲು ಈಗ ಅಧಿಕಾರವಿರುತ್ತದೆಯೇ ?

ಆ) ಹಾಗಿದ್ದಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ಕಡುಬಡವರಿಗೆ ಉಚಿತ ನಿವೇಶನ ಹಂಚಲು ಅವಕಾಶವಿದೆಯೆ, ಹಾಗಿಲ್ಲದಿದ್ದಲ್ಲಿ ಕಡುಬಡವರಿಗೆ ಉಚಿತ ನಿವೇಶನಗಳನ್ನು ಕೊಡಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮಂತ್ರಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಸರ್ಕಾರದ ಅನುಮತಿಯ ಮೇರೆಗೆ ನಿವೇಶನಗಳನ್ನು ಮಾಡಿ ಹಂಚಲು ನಗರ ಪುರಸಭೆಗಳಿಗೆ ಅಧಿಕಾರವಿರುತ್ತದೆ.

ಆ) ಉಚಿತವಾಗಿ ನಿವೇಶನಗಳನ್ನು ಕೊಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

ಶ್ರೀ ಕರಿಯಣ್ಣ.—ಈಗ ತಾವು ಯಾವುದೇ ನಿವೇಶನವನ್ನು ಮಾಡಬಾರದೆಂದು ಹೇಳಿ ಸರ್ಕಾರದ ಆದೇಶವನ್ನು ಕಳುಹಿಸಿದ್ದೀರಿ ಈಗ ನಗರ ವ್ಯಾಪ್ತಿಗಳಲ್ಲಿ ಡೆವಲಪ್‌ಮೆಂಟ್ ಅಥಾರಿಟಿಗಳನ್ನು ಮಾಡಿರುವುದರಿಂದ, ಅದರ ಮೂಲಕ ನಿವೇಶನ ಹಂಚಬೇಕೇ ವಿನಹ ನಗರಸಭೆಗಳು ಹಂಚಲಿಕ್ಕೆ ಆಗುವುದಿಲ್ಲ ವೆಂದು ಹೇಳಿದ್ದಾರೆ. ಆದರೆ ಇಲ್ಲಿ ಸರ್ಕಾರದ ಅನುಮತಿಯ ಮೇರೆಗೆ ಮಾಡಬಹುದು ಎಂದು ಹೇಳಿದ್ದಾರೆ. ಸರ್ಕಾರ ಮಾಡಬಾರದೆಂದು ಹೇಳಿರುವುದ ರಿಂದ, ಸರ್ಕಾರ ಅನುಮತಿ ಕೊಟ್ಟರೆ ಇದನ್ನು ಮಾಡಲಿಕ್ಕೆ ಸಾಧ್ಯವಿದೆಯೇ ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಅಧ್ಯಕ್ಷರೆ ಅವರ ಸಲಹೆಯನ್ನು ಪರಿಶೀಲಿಸಲಾಗುವುದು.

ಶ್ರೀ ಕರಿಯಣ್ಣ.—ಯಾರು ಬಡತನ ರೇಖೆಯಿಂದ ಕೆಳಗಡೆ ಇದ್ದಾರೋ, ಅವರಿಗೆ ಪುಕ್ಕಟೆ ನಿವೇಶನ ಕೊಡಲಿಕ್ಕೆ ಅವಕಾಶ ಇದೆಯೇ ಅಂದರೆ ಇಲ್ಲ ಎಂದು ಹೇಳುತ್ತಿದ್ದೀರಿ. ಆ ರೀತಿ ಇದ್ದ ಮೇಲೆ ಬಡವರಿಗೆ ಪುಕ್ಕಟೆ ನಿವೇಶನ ಕೊಡಲಿಕ್ಕೆ ಅವಕಾಶ ಇಲ್ಲದೇ ಇದ್ದರೆ ಅವರು ಯಾವ ರೀತಿ ಬದುಕಬೇಕು. ಅವರಿಗೆ ಪುಕ್ಕಟೆ ನಿವೇಶನ ಕೊಡಲಿಕ್ಕೆ ಹರಿಜನ ಗಿರಿಜನರಿಗಾಗಲಿ, ಆರ್ಥಿಕವಾಗಿ ಹಿಂದುಳಿದವರಿಗಾಗಲಿ ಕೊಡಲಿಕ್ಕೆ ತಾವೇನಾದರೂ ಯೋಚನೆ ಮಾಡುತ್ತೀರಾ. ಮುಂದೆಯಾದರೂ ಈ ರೀತಿ ಕೊಡಲಿಕ್ಕೆ ತಾವು ಕಾನೂನು ಮಾಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಬಡವರಿಗೆ ಉಚಿತವಾಗಿ ನಿವೇಶನವನ್ನು ಕೊಡಬೇಕೆಂಬ ಬಗ್ಗೆ ಸರ್ಕಾರದ ಒಂದು ನಿಯಮ ಇದೆ. ಆದರೆ ಇದೇ ವರ್ಗದಲ್ಲಿನ ಜನರು ಏನು ಪಟ್ಟಣಗಳಲ್ಲಿ ವಾಸ ಮಾಡುತ್ತಿರುತ್ತಾರೆ ಅಂತಹವರಿಗೆ. ಈ ಅವಕಾಶವಿಲ್ಲ ಎನ್ನುವುದು ಸ್ಪಷ್ಟವಾಗಿದೆ ಆದರೆ ತಾವು ಏನನ್ನು ಹೊಸ ಸಲಹೆಗಳನ್ನು ಕೊಟ್ಟಿದ್ದೀರಿ ಅದನ್ನು ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಕರಿಯಣ್ಣ.—ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಪುಕ್ಕಟೆ ನಿವೇಶನವನ್ನು ಕೊಡುವ ಅಧಿಕಾರವನ್ನು ಪಂಚಾಯತಿಗೆ ಕೊಟ್ಟಿದ್ದೀರಿ. ಅಲ್ಲೂ ಕೂಡ ಪುಕ್ಕಟೆ ನಿವೇಶನವನ್ನು ಕೊಡಂಬುದಕ್ಕೆ

ಅವಕಾಶವಿಲ್ಲ. ಪಂಚಾಯತಿಗಳವರಿಗೂ ಸಹ ನಿವೇಶನವನ್ನು ಕೊಡುವುದಕ್ಕೆ ಸರಕಾರದವರು ಬಜೆಟ್ಟಿನಲ್ಲಿ ಅವಕಾಶ ಮಾಡಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಇಂತಹ ಅವಕಾಶ ಇಲ್ಲದೇ ಇರುವುದರಿಂದಾಗಿ ಈಗಲಾದರೂ ಅಂತಹ ಅವಕಾಶವನ್ನು ಕಲ್ಪಿಸಿ ಕೊಡುತ್ತೀರಾ ? ಈ ಬಗ್ಗೆ ನನಗೆ ಸ್ಪಷ್ಟವಾದಂತಹ ಭರವಸೆ ಕೊಡಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇದು ತಮಗೆ ಮತ್ತು ಎಲ್ಲಾ ಸದಸ್ಯರಿಗೆ ಗೊತ್ತಿರತಕ್ಕಂತಹ ವಿಚಾರವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿನ ಹರಿಜನ ಗಿರಿಜನರಿಗೆ ಅಂದರೆ ಎಸ್‌ಸಿಎಸ್‌ಟಿ ಯವರಿಗೆ ಉಚಿತ ನಿವೇಶನವನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ಸಾರೋದ್ಧಾರವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇದನ್ನು ಮುಂಡಲ ಪಂಚಾಯತಿಯು ಮುಖಾಂತರ ಹಂಚಿಕೆ ಮಾಡುತ್ತಿದ್ದೇವೆಯೇ ಹೊರತು, ಅವರು ಹಣವನ್ನು ತೆಗೆದುಕೊಂಡು ನಿವೇಶನವನ್ನು ನೀಡಿದ್ದಾರೆ ಎಂಬ ಬಗ್ಗೆ ನಮಗೆ ಯಾವ ನಿದರ್ಶನ ಬಂದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿನ ಪಾವರ್ಟಿ ಲೈನ್‌ನಿಂದ ಕೆಳಗೆ ಇರತಕ್ಕಂಥ ವರಿಗೆ ಈಗಲೂ ಕೂಡ ನಿವೇಶನವನ್ನು ಉಚಿತವಾಗಿ ಕೊಡುತ್ತಿದ್ದೇವೆ. ಅದು ಜೀವಂತವಾಗಿ ಇದೆ. ಆದರೆ ಪಟ್ಟಣ ಪ್ರದೇಶಗಳಲ್ಲಿ ಈ ಸೌಲಭ್ಯ ಇಲ್ಲವೆಂದು ಹೇಳಿದ್ದೇನೆ. ತಾವು ಕೊಟ್ಟಿರತಕ್ಕಂತಹ ಒಳ್ಳೆಯ ಸಲಹೆ ಏನು ಇದೆ, ಅದನ್ನು ಪರಿಶೀಲನೆ ಮಾಡಿ ಮಂತ್ರಿ ಮಂಡಲದ ಮುಂದೆ ತರಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕರಿಯಣ್ಣ —ಶಾಸಕನಾದ ನಾನು ಜಿಲ್ಲಾ ಪರಿಷತ್ ಸದಸ್ಯನೂ ಆಗಿದ್ದೇನೆ. ಉಚಿತವಾದ ನಿವೇಶನವನ್ನು ಕೊಟ್ಟಿರುವಂತಹ ಉದಾಹರಣೆ ಇಲ್ಲ. ಏಕೆಂದರೆ ತಾಲ್ಲೂಕು ಪಂಚಾಯತಿಯಲ್ಲೂ ಕೂಡ ಇದನ್ನು ವಿಮರ್ಶೆ ಮಾಡಿದ್ದೇವೆ. ಎಲ್ಲಿಯೂ ಕೂಡ ಮಂಡಲ ಪಂಚಾಯಿತಿಗಳಿಗೆ ಸರ್ಕಾರ ಆರ್ಥಿಕವಾದ ಸಹಾಯವನ್ನು ಕೊಡದೇ ಇರುವುದರಿಂದ ಅವರು ಜಮೀನನ್ನು ಆಕ್ಟಿರ್ ಮಾಡಿ ಪುಕ್ಕಟೆ ನಿವೇಶನವನ್ನು ಹಂಚುವುದಕ್ಕೆ ಆಗುವುದಿಲ್ಲವೆಂದು ಹೇಳಂತ್ತಿದ್ದಾರೆ. ಆದ್ದರಿಂದ ಇದನ್ನು ಯಾವ ರೀತಿ ಬಗೆಹರಿಸುತ್ತಿರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ —ಈಗಾಗಲೇ ಏನು ಉತ್ತರವನ್ನು ಹೇಳಿದ್ದೇನೆ ಅದಕ್ಕಿಂತ ಹೆಚ್ಚು ಉತ್ತರವನ್ನು ಕೊಡುವುದಕ್ಕೆ ನನ್ನ ಕೈಲಿ ಆಗುವುದಿಲ್ಲ

ಖಾಸಗಿ ವಿದ್ಯಾ ಸಂಸ್ಥೆಗಳ ಮೇಲೆ ಸರ್ಕಾರದವರ ಹತೋಟಿ

೬೨೭. ಶ್ರೀ ಆರ್. ಬಿ ಚೌದರಿ (ಸಿಂಧಗಿ).—ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರದ ಹತೋಟಿಯಿದೆಯೇ ?

ಆ) ಖಾಸಗಿ ಶಿಕ್ಷಣ ಸಂಸ್ಥೆಗೆ ಸರ್ಕಾರವು ಮಾಡಿದ ಶಿಕ್ಷಕರ ಅನುಮೋದನೆಯನ್ನು ರದ್ದು ಪಡಿಸಬಹುದೇ ?

ಶ್ರೀ ಕೆ.ಹೆಚ್. ರಂಗನಾಥ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಸರ್ಕಾರದ ಅನುಮತಿ ಪಡೆದು ನಡೆಸುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಮಾತ್ರ ಸರ್ಕಾರದ ಹತೋಟಿ ಇದೆ. ಅನುಮತಿ ಪಡೆಯದೆ ಪ್ರಾರಂಭಿಸಿರುವ ಶಾಲೆಗಳಿಗೆ ಮಕ್ಕಳನ್ನು ಸೇರಿಸಬಾರದೆಂದು ಸಾರ್ವಜನಿಕರಿಗೆ ಪ್ರತಿ ವರ್ಷ ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಸಲಾಗುತ್ತಿದೆ. ಹಾಗೂ ಇಂತಹ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರ ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಲಾಗುವುದಿಲ್ಲ.

ಆ) ನಿಯಮಗಳ ಪ್ರಕಾರ ಅವಕಾಶ ಇಲ್ಲ.

ಶ್ರೀ ಆರ್.ಬಿ. ಚೌಧರಿ.—ಬಿಜಾಪುರದಲ್ಲಿ ಒಂದು ವಿ.ವಿ. ಸಂಘ ಎಂಬ ಒಂದು ಖಾಸಗಿ ಸಂಸ್ಥೆ ಇದೆ. ಅವರ ನಾವು ಆರ್ಥಿಕವಾಗಿ ಬದ್ಧರಿದ್ದೇವೆ. ನಮ್ಮ ಮೇಲೆ ಸರಕಾರದ ಹತೋಟಿ ಇಲ್ಲವೆಂಬ ರೀತಿಯಲ್ಲಿ ಹೇಳುತ್ತಿದ್ದಾರೆ ಇದು ನಿಜವೇ,